ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು-65

ಕುಣಿಗಲ್ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: 24.09.15

ಈ ವಾರದ ಮುನ್ಸೂಚನೆ (25-09-15 to 29.09.15 ವರೆಗೆ)

ನಿಯತಾಂಕಗಳು	25/9/15	26/9/15	27/9/15	28/9/15	29/9/15
ಮಳೆ (ಮಿ ಮಿ)	8	5	8	21	6
ಗರಿಷ್ಠ ಉಷ್ಣಾಂಶ(ಡಿ.ಸೆ.)	29	33	32	29	29
ಕನಿಷ್ಠ ಉಷ್ಣಾಂಶ (ಡಿ.ಸೆ.)	21	21	21	22	20
ಮೋಡ (ಪ್ರಮಾಣ)	5	3	5	6	5
ಆರ್ದ್ರತೆ ೭.೨೦ ಬೆ (ಶೇ)	99	96	94	97	78
ಆರ್ದ್ರತೆ ೨.೨೦ ಮ (ಶೇ)	67	48	53	61	61
ಗಾಳಿಯ ವೇಗ (ಕಿ.ಮಿ/ಗಂಟೆಗೆ)	7	6	6	8	4
ಗಾಳಿಯ ದಿಕ್ಕು (ಡಿಗ್ರಿ)	329	290	85	334	270

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ಕುಣಿಗಲ್ ಹಾಗೂ ಸುತ್ತಮುತ್ತ ಮುಂದಿನ ಐದು ದಿನಗಳಲ್ಲಿ ಹಗುರದಿಂದ ಸಾಧಾರಣ ಮಳೆಯ ನಿರೀಕ್ಷೆಯಿದೆ. ದಿನದ ಗರಿಷ್ಠ ಉಷ್ಣಾಂಶವು 29-33.0°C ಮತ್ತು ಕನಿಷ್ಠ 20-22°C ಇರಲಿದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ 78-99% ಇದ್ದು, ಮಧ್ಯಾಹ್ನ 48-67% ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 4-8 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಅಲ್ಪಾವಧಿ ಬೆಳೆಗಳಾದ ಹುರುಳಿ, ಅಲಸಂದೆ, ಸಜ್ಜೆ, ಉದ್ದು, ನವಣೆ, ಎಳ್ಳು, ಸಾವೆ, ಹೆಸರು ಬೆಳೆಗಳನ್ನು ಬೆಳೆಯಬಹುದು
- ಕಳೆ ನಿರ್ವಹಣೆ ಕೈಗೊಳ್ಳಬೇಕು
- ಎರಡು ದಿನಗಳ ನಂತರ ಮಳೆಯ ನಿರೀಕ್ಷೆ ಇರುವುದರಿಂದ ಔಷಧಿ ಸಿಂಪಡಣೆಯನ್ನು ಮುಂದೂಡಬೇಕು.

ಬೆಳೆ ಹಾಗೂ ತಳಿಗಳು:

ಸೆಪ್ಟೆಂಬರ್ ತಿಂಗಳಲ್ಲಿ ಬಿತ್ತನೆ ಮಾಡಬೇಕಾದ ಬೆಳೆಗಳು:

ಹುರುಳಿ- ಕೆ.ಬಿ.ಹೆಚ್-೧, ಫ್.ಹೆಚ್.ಜಿ.-೯, ಅವರೆ-ಹೆಚ್.ಎ-೧, ೩, ೪, ಪಾಪ್‌ಕಾರ್ನ್: ಅಂಬರ್. ಅಲಸಂದೆ: ಟಿ.ವಿ.ಎಕ್ಸ್-೯೪೪, ಕೆ.ಬಿ.ಸಿ.-೧, ಕೆ.ಎಮ್-5, ಅಥವಾ ತರಕಾರಿಗಾಗಿ ಪಿ.ಕೆ.ಬಿ-4 ತಳಿಯನ್ನು ಆಯ್ಕೆ ಮಾಡಿಕೊಳ್ಳಬಹುದು.

ಸಸ್ಯ ಸಂರಕ್ಷಣೆ:

- ✓ **ರಸ ಹೀರುವ ಕೀಟಗಳು:** ಇವುಗಳ ಹತೋಟಿಗೆ ಶೇ. 4ರಷ್ಟು ಬೇವಿನ ಕಷಾಯವನ್ನು ಸಿಂಪಡಿಸಬೇಕು ಅಥವಾ ಬೇವಿನ ಎಣ್ಣೆಯನ್ನು ಸಿಂಪಡಿಸಬೇಕು. ಅಂಟು ದ್ರಾವಣವನ್ನು ಲೇಪಿಸಿದ ಹಳದಿ ಬಣ್ಣದ ಅಂಟು ಬಲೆಗಳನ್ನು ಅಲ್ಲಲ್ಲಿ ಇಡುವುದರಿಂದ ಬಿಳಿನೊಣ, ರೆಕ್ಕೆ ಇರುವ ಏಫಿಡ್ಸ್ ಹಾಗೂ ಇನ್ನಿತರೆ ಕೀಟಗಳು ಆಕರ್ಷಣೆಗೊಂಡು ಆ ಬಲೆಗೆ ಅಂಟಿಕೊಳ್ಳುತ್ತವೆ.
- ✓ ತೊಗರಿಯಲ್ಲಿ ಸೊರಗು ರೋಗ ಇರುವ ಕಡೆ ಕಾರ್ಬೆಂಡೇಜಿಮ್ (1ಮಿ.ಲೀ. ಪ್ರತಿ ಲೀಟರ್ ನೀರಿಗೆ) ತೊಗರಿ ಗಿಡದ ಬುಡದಲ್ಲಿರುವ ಮಣ್ಣಿಗೆ ಸೇರಿಸುವುದು.
- ✓ **ಗೂಡು ಮಾಡುವ ಹುಳು** ಕಂಡುಬಂದರೆ ಕ್ವಿನಾಲ್ಫಾಸ್ (2 ಮಿ.ಲೀ/ಲೀ) ಸಿಂಪಡಿಸಿ.
- ✓ **ದಾಳಿಂಬೆ: ಅಂಗಮಾರಿ ರೋಗಕ್ಕೆ ಸ್ಟ್ರೆಪ್ಟೋಸೈಕ್ಲಿನ್ (೦.೫ಗ್ರಾಂ) + ಕಾಪರ್ ಆಕ್ಸಿ ಕ್ಲೋರೈಡ್ (೨.೫ ಗ್ರಾಂ) ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು. ಬೆಳ್ಳುಳ್ಳಿ ಕಷಾಯ ಕೂಡ ಬ್ಯಾಕ್ಟೀರಿಯನಾಶಕ ಗುಣವನ್ನು ಹೊಂದಿದೆ.**
- ✓ **ಕಾಯಿ ಕೊಳೆ ರೋಗಕ್ಕೆ ಕ್ಯಾಪ್ಟಾನ್ ಸಿಂಪಡಿಸಬಹುದುನ್ ಅಥವಾ ಕಸ್ಪೋಡಿಯಾ ಶಿಲೀಚಿಧ್ರನಾಶಕವನ್ನು ಸಿಂಪಡಿಸಬಹುದು.**

ನೋಡಲ್ ಅಧಿಕಾರಿ:
ಕೃಷಿ ಹವಾಮಾನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು